ಬೂಕನಕೆರೆ ವಿಜೇಂದ್ರ, ಮೈಸೂರು
ಭಿಕ್ಷುಕರು ಸಹ ಕುಡಿಯುತ್ತಾರಲ್ಲ, ಹಣ ಎಲ್ಲಿಂದ ಬರುತ್ತದೆ?



ಐಲೈಲಾಗಿ ಆಡಿ ಮಜಾ ಕೊಡುವವನಿಗೆ ಮುಫತ್ ಕುಡಿಸುವ ಮಂದಿ ಇದ್ದಾರೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಮಣ್ಣಿನ, ಗಾಜಿನ ವಸ್ತುಗಳು ಒಡೆಯುವುದು ಗೊತ್ತು. ಹಾಲು ಒಡೆಯುವುದು ಎಂದರೇನು?
ಹಾಲಾಗಿದ್ದಾಗ ಸಪಾಟಾದ ಮೇಲ್ಪದರ ಹಾಳಾದಾಗ ಹತ್ತಿಯ ಉಂಡೆಗಳಂತೆ ಒಡೆದಿರುತ್ತದಲ್ಲ.

ಸುಲೋಚನ ಜಿ. ರಾವ್, ಬೆಂಗಳೂರು
ಮನುಷ್ಯನ ದೇಹ ದಪ್ಪವಾದಂತೆಲ್ಲ ತಲೆಯೂ ದಪ್ಪವಾಗಿ ಬೆಳೆಯುತ್ತಾ ಹೋಗಿದ್ದರೆ ಏನಾಗುತ್ತಿತ್ತು?
ಅಡ್ಜಸ್ಟೆಬಲ್ ಅಳತೆಯ ಹೆಲ್ಮೆಟ್, ಕನ್ನಡಕಗಳನ್ನು ತಯಾರಿಸಬೇಕಾಗುತ್ತಿತ್ತು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
'ಮೌನ ಕಾವ್ಯ' ಯಾವುದು ಗುರುಗಳೆ?



ಆಗಷ್ಟೇ ಹಾಲು ಕುಡಿದು ತೊಟ್ಟಿಲಲ್ಲಿ ನಿದ್ರಿಸುತ್ತಿರುವ ಮಗು.

ವಿ. ಹೇಮಂತಕುಮಾರ್, ಬೆಂಗಳೂರು
ಡ್ಯೂಟಿ ಮುಗಿಸಿ ಮನೆಗೆ ಬರುತ್ತಿದ್ದಂತೆಯೇ ತುತ್ತು ಬೇಕಾ, ಮುತ್ತು ಬೇಕಾ ಎಂದು ಕೇಳುವಳಲ್ಲ?
ತುತ್ತನ್ನೇ ಕೇಳಿ. ಮಗುವನ್ನು ಎತ್ತಿ ಮುದ್ದಾಡಲು ಹೆಚ್ಚಿನ ಸಮಯ ಬೇಕಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
'ನೆಮ್ಮದಿ'ಗೆ ಎಷ್ಟು ಬೆಲೆ?
'ಅತೃಪ್ತಿ' ಕಳೆಯಲು ಎಷ್ಟು ಖರ್ಚಾಯಿತೋ ಅಷ್ಟು.

ಬಾ.ರಂ. ಸುರೇಶ್, ಶಿವಮೊಗ್ಗ
ಜಾತಕವನ್ನು ನೋಡಿ ಮದುವೆ ಮಾಡಿದರೂ ವಿಚ್ಛೇದನಗಳಾಗುತ್ತವಲ್ಲ, ಜಾತಕವೇ ಸುಳ್ಳೇ?
ನೋಡಬೇಕಾದ ಜಾತಕವನ್ನು ನೋಡಿರಲಿಲ್ಲವಲ್ಲ... ಅವರಿಬ್ಬರ ವಕೀಲರ ಜಾತಕದಲ್ಲಿ ಶುಕ್ರದೆಸೆ ಇತ್ತಂತೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಈಗಿನ ಯುವಕ–ಯುವತಿಯರಲ್ಲಿ ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುವ ವ್ಯಕ್ತಿತ್ವ ಕಾಣುತ್ತಿಲ್ಲವಲ್ಲಾ?
ಈ ಮಾತನ್ನು ದುರ್ಯೋಧನನನ್ನು ಕುರಿತು ವಿದುರನು ಭೀಷ್ಮನಿಗೆ ಹೇಳಿದನಂತೆ.

ಕೆ.ವಿ. ನಂದೀಶ್, ಕುರಂಕೋಟೆ
ನಮ್ಮೂರ ಹೋಟೆಲ್ ಮಾಲೀಕರು ತಮ್ಮಲ್ಲಿ ತಿಂಡಿ, ಊಟ ಸೇವಿಸದೆ ಮನೆಗೆ ಹೋಗುವರೇಕೆ?
ಹೋಟೆಲ್ ನಡೆಸಲು ತಾವು ಸ್ವಸ್ಥವಾಗಿ ಇರಬೇಕೆಂಬ ಕಾಳಜಿ.

ನಖಾತೆ ಆನಂದರಾವ್, ಮೈಸೂರು
ಸ್ವಂತ ವಿಷಯಗಳನ್ನು ಜನರು ಇನ್ನೊಬ್ಬರಲ್ಲಿ ಹೇಳಿಕೊಳ್ಳಲು ಹಿಂಜರಿಯುವುದೇಕೆ?
ಅವರು ಹಿತೈಷಿಯೋ, ಸುದ್ದಿವಾಹಿನಿಯೋ ಎಂದು ತಿಳಿಯುವುದು ಕಷ್ಟವಾದ್ದರಿಂದ.

ಅನಂತಪದ್ಮನಾಭ ಎಚ್.ಎಂ. ಮೈಸೂರು
ಹೆನ್ ಪೆಕ್ಡ್ ಹಸ್ಬೆಂಡ್ ಇದ್ದಾರೆ. ಕಾಕ್ ಪೆಕ್ಡ್ ವೈಫ್ ಏಕಿಲ್ಲ?
ಇದ್ದಾರೆ. ಆದರೆ ಎಗ್ಗಿಲ್ಲದೆ ಹೇಳಿಕೊಳ್ಳಲು ಚಿಕನ್ ಔಟ್ ಆಗಿದ್ದಾರೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಇಂದಿನ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳಿಗೆ ಅಂಕಗಳಿಕೆ ಮುಖ್ಯವೋ, ಜೀವನದಲ್ಲಿ ಗೆಲ್ಲುವ ಛಾತಿ ಮುಖ್ಯವೋ?
ಮರ್ಯಾದಸ್ಥರಿಗೆ ಇದು, ಮಂತ್ರಿಕುವರರಿಗೆ ಅದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಚೆಕಪ್‌ಗೂ ಪಿಕಪ್‌ಗೂ ಏನು ಸಂಬಂಧ?
'ಕಪ್'ಪದವೇ. ಚೆಕಪ್ ಮಾಡಿದಾಗ ಬ್ಯಾಕಪ್ ಚೆನ್ನಾಗಿದ್ದರೆ ಪಿಕಪ್.

## ವಾರದ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ನಮ್ಮ ಹಳ್ಳಿಗಾಡಿನ ಪರಸ್ಪರ ಬೈಗುಳಗಳ ಸಾಹಿತ್ಯ ರಚನಕಾರರು ಯಾರಿರಬಹುದು?
ಶಕ್ತಿ ಕಡಿಮೆ, ಬಾಯಿ ಜಾಸ್ತಿ ಇದ್ದ ಪುರಾತನ ಕೋಪಿಷ್ಠ ಗಂಡಸರು.

ಸಿಹಿಮೊಗೆ ರಮೇಶ್, ಮೈಸೂರು
ಮಠಾಧಿಪತಿಗಳ ಪೀಠಕ್ಕೆ ನೇಮಕಕ್ಕೆ ಲಿಟ್‌ಮಸ್ ಪರೀಕ್ಷೆ ಹೇಗಿರಬೇಕು?
ಮಿಸ್‌ಗಳ ಪರೇಡ್ ನಡೆಸಿ ಕಣ್ಣು ಲಿಟ್ ಆಯಿತೋ ಇಲ್ಲವೋ ನೋಡಬೇಕು.

ಜಗದೀಶ ಬಿ. ಹೊಸೂರು, ಮೈಸೂರು
ದೇವರ ಪಾದ ಸೇರಿದವರನ್ನು ನೋಡಿಬಂದ ಬಳಿಕ ಸ್ನಾನ ಮಾಡುವುದೇಕೆ?
ಸತ್ತವರಿಗೇ ಸ್ನಾನ ಮಾಡಿಸಿರುವಾಗ ಬದುಕಿರುವವರೂ ಮಾಡಬೇಕೆಂಬ ಪ್ರಜ್ಞೆ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಶಕ್ತಿ, ಯುಕ್ತಿ ಎರಡೂ ಸಮವಾಗಿದ್ದರೆ ಹೇಗಿರುತ್ತಿತ್ತು ಸರ್?



ದ್ವಾಪರದ ಶ್ರೀಕೃಷ್ಣನಂತೆ.

ಅನಸೂಯ ಟಿ, ಕೇದಿಗೆಮನೆ
ಮನುಷ್ಯನನ್ನು ಸೃಷ್ಟಿಸದೆ ಬರೀ ಪಶು, ಪಕ್ಷಿ, ಕ್ರಿಮಿ, ಕೀಟಗಳನ್ನು ಸೃಷ್ಟಿಸಿದ್ದರೆ ಜಗತ್ತು ಚೆನ್ನಾಗಿರುತ್ತಿತ್ತಲ್ಲವೆ?
ನಿಜ. ಎಲ್ಲದರ ಮಿಕ್ಸ್ ಹೇಗಿರುತ್ತದೆಂದು ಪ್ರಯೋಗಿಸಿ ದೇವ ತಪ್ಪು ಮಾಡಿದ.

ರಾಮಸ್ವಾಮಿ ಭೀಮನಕಟ್ಟೆ, ಬೆಂಗಳೂರು
ಸತ್ಯ ಹೇಳಿ; ಅಲ್ಪಸಂಖ್ಯಾತರು ಎಂದರೆ ಯಾರು?
ಸ್ಪಷ್ಟವಾಗಿ ಕೇಳಿ, ಗಣಿತದ ಎಣಿಕೆಯ ಲೆಕ್ಕದಲ್ಲೋ, ರಾಜಕೀಯದವರ ಎಣಿಕೆಯ ಲೆಕ್ಕದಲ್ಲೋ?

ಬಿ.ಆರ್. ಉಷಾ, ಟೊರೊಂಟೊ
ಸಂಸಾರಿಯಾಗಲೋ, ಸನ್ಯಾಸಿಯಾಗಲೋ?
ಜವಾಬ್ದಾರಿ ಬೇಡ, ಸುಖ ಬೇಕೆಂದರೆ ಸನ್...

■ ರಾಮ್